**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಪಿ.ಸಿ.ಆರ್. ನಂ. 2253/2025 ಚಾ ಸಾ-1**

| | |
|---|---|
| **ಸಾಕ್ಷಿದಾರರ ಹೆಸರು** | ನರಸಿಂಹಮೂರ್ತಿ.ಎಲ್. |
| **ತಂದೆಯ ಹೆಸರು** | ಲೇಟ್ .ಲಕ್ಷ್ಮಿನರಸಿಂಹಯ್ಯ.ಎನ್. |
| **ವಯಸ್ಸು** | 64 ವರ್ಷ |
| **ಉದ್ಯೋಗ** | ಸಿವಿಲ್ ಕಂಟ್ರಾಕ್ಟರ್. |
| **ವಾಸ** | ಜಯನಗರ, ಬೆಂಗಳೂರು |
| **ಪ್ರಮಾಣೀಕರಿಸಿದ ದಿನಾಂಕ** | 02.09.2025. |

**ಭಾ.ನಾ.ಸು.ಸಂ.ಕಲಂ.223 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆಃ**

ದಿ.01.10.2014 ರಲ್ಲಿ ನಾನು ಗೀತಾ ಶಿವಕುಮಾರ್ ಎನ್ನುವವರಿಗೆ ಪ್ರಾಪರ್ಟಿ ನಂ.2, ಮಾರ್ಕೇಟ್ ರಸ್ತೆಯಲ್ಲಿರುವ ನನ್ನ ಕಮರ್ಷಿಯಲ್ ಬಿಲ್ಡಿಂಗ್ ನ್ನು ನಾನು ಬಾಡಿಗೆಗಾಗಿ ಕರಾರು ಪತ್ರವನ್ನು ಮಾಡಿಕೊಟ್ಟಿದ್ದೆ. ದಿ.28.06.2024 ರವರೆಗೂ ಸದರಿ ಗೀತಾ ಶಿವಕುಮಾರ್ ರವರು ಬಾಡಿಗೆಗೆ ಇದ್ದರು. ಆದರೆ ಅವರು ಯಾವುದೇ ಬಾಡಿಗೆ ಹಣವನ್ನು ಕೊಟ್ಟಿರುವುದಿಲ್ಲ. ಆದ ಕಾರಣ ನಾನು ಓಎಸ್ ನಂ.1862/2018ರಂತೆ ಒಂದು ಸಿವಿಲ್ ದಾವೆಯನ್ನು ಸಲ್ಲಿಸಿರುತ್ತೇನೆ. ದಿ.15.03.2024 ರಂದು ಸದರಿ ಗೀತಾ ಶಿವಕುಮಾರ್ ರವರು ಪ್ರಕರಣವನ್ನು ರಾಜೀ ಮಾಡಿ ಕೊಳ್ಳೋಣಾ ನನಗೆ ರೂ.55,000/- ಹಣವನ್ನು ನೀಡಿರುತ್ತಾರೆ. ದಿ.28.06.2024 ರಂದು ನಾನು ನ್ಯಾಯಾಲಯದ ಆದೇಶವನ್ನು ಪಡೆದು ಸದರಿ ಗೀತಾ ಶಿವ ಕುಮಾರ್ ರವರಿಂದ ಬಿಲ್ಡಿಂಗ್ ಯಿಂದ ಖಾಲಿ ಮಾಡಿಸಿರುತ್ತೇನೆ.

2. ದಿ.01.09.2024 ರಂದು ವೈಷ್ಣವಿ ಕಾಂಡಿಮೆಂಟ್ಸ್ ರವರಾದ ಚಂದ್ರಶೇಖರ್, ಪಾರ್ಥಗೌಡ ಮತ್ತು ಕವಿತಾ ಜೈನ್ ರವರಿಗೆ ಸದರಿ ಬಿಲ್ಡಿಂಗ್ ನ್ನು ಬಾಡಿಗೆಗೆ ಕೊಟ್ಟಿರುತ್ತೇನೆ. ನಾನು ಜಯನಗರ ಶಾಖೆಯಲ್ಲಿರುವ ಐಸಿಐಸಿಐ ಬ್ಯಾಂಕಿಗೆ ಲೋನ್ ಪಡೆಯಲು ಅರ್ಜಿ

ಸಲ್ಲಿಸಿದಾಗ ಅವರು ನಿನ್ನ ದಾಖಲೆಗಳನ್ನು ತೆಗೆದುಕೊಂಡು ಬರಲು ಹೇಳಿರುತ್ತಾರೆ. ನಾನು ಈ ಸಿ ಯನ್ನು ಪಡೆದಾಗ ದಿ.06.03.2024 ರಲ್ಲಿ ಗೀತಾ ಶಿವಕುಮಾರ್ ರವರ ಮಗಳಾದ ಸ್ವಾತಿ ಅಂದರೆ ಸ್ವಾತಿ.ಕೆ.ಎಸ್. ಈ ಪ್ರಕರಣದ ಆರೋಪಿಯ ಹೆಸರಿನಲ್ಲಿ ಭೋಗ್ಯದ ಕರಾರು ಪತ್ರ ನಮೂದಾಗಿರುವುದು ನನಗೆ ತಿಳಿದು ಬಂತು. ಸದರಿ ನೊಂದಣಿ ಕಛೇರಿಯಲ್ಲಿ ನನ್ನ ರೀತಿಯಲ್ಲಿ ಬೇರೆ ವ್ಯಕ್ತಿಯನ್ನು ಉಪ ನೊಂದಣಾಧಿಕಾರಿಯಲ್ಲಿ ಕೂರಿಸಿ ಸ್ವಾತಿ.ಕೆ.ಎಸ್ ರವರು ಭೋಗ್ಯದ ಕರಾರು ಪತ್ರ ಮಾಡಿಕೊಂಡಿದ್ದರು. ಈ ಬಗ್ಗೆ ನಾನು ದಿ .13.12.2024 ರಂದು ವಿ.ವಿ.ಪುರಂ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಆದರೆ ಪೊಲೀಸರು ಸದರಿ ದೂರಿನ ಸಂಬಂಧ ಯಾವುದೇ ಸೂಕ್ತ ಕಾನೂನು ಕ್ರಮ ತೆಗೆದುಕೊಂಡಿಲ್ಲ ಮತ್ತು ನನಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಆದ್ದರಿಂದ ಈ ಖಾಸಗಿ ದೂರನ್ನು ಆರೋಪಿಯ ವಿರುದ್ದ ಸಲ್ಲಿಸಿರುತ್ತೇನೆ.

**ಮುಂದುವರೆದ ಸತ್ಯ ಪ್ರಮಾಣ ಹೇಳಿಕೆಗಾಗಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

**Complainant present. Sworn statement of complainant is recorded as CW-1.**

Advocate for complainant is present.

For Further Sworn statement. Call on 11.09.2025.

III Addl.C.M.M, Bengaluru.